ಶ್ರೀ ಎನ್. ನಂಜೇಗೌಡ.—ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಮಸ್ಕು ಕಟ್ಟಿದ ಗಾಣಗಳನ್ನು ಹಾಕಬೇಕಾದರೂ 500 ರೂಪಾಯಿ ಡಿಪಾಜಿಟ್ ಲೈಸೆನ್ಸಿಗೆ ತೆಗೆದುಕೊಳ್ಳುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಮಲ್ಲಪ್ಪ.—ಅಗತ್ಯವಿಲ್ಲ. ಕಾನೂನು ಸ್ಪಷ್ಟವಾಗಿದೆ. ಎತ್ತು ಗಾಣ ಕಟ್ಟಿಕೊಂಡು ಬೆಲ್ಲ ಮಾಡುವವರಿಗೆ ಲೈಸೆನ್ಸ್ ಬೇಕಾಗಿಲ್ಲ. ಈತನಕ ಇಂಥ ಪರಿಸ್ಥಿತಿ ಇದೆ ಎಂಬುದನ್ನು ನನ್ನ ತಿಳುವಳಿಕೆಗೆ ಯಾರೂ ತಂದಿಲ್ಲ. ಒಂದು ವೇಳೆ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಯಾರಾದರೂ ನಿರ್ಬಂಧ ಹೇರಿಸಿದರೆ, ಅಂಥ ಅಧಿಕಾರಿಗಳ ಮೇಲೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ರೈತರು ಬೆಲ್ಲ ಮಾಡುವುದಕ್ಕೆ ನಿಯಂತ್ರಣ ಹಾಕಿದ್ದರೆ, ಅವರ ಒಂದು ಹಕ್ಕು ಬಾಧ್ಯತೆಗೆ ಧಕ್ಕೆ ಬರುವುದಿಲ್ಲವೆ?

ಶ್ರೀ ಕೆ. ಮಲ್ಲಪ್ಪ.—ಮೊದಲೇ ಹೇಳಿದ ಹಾಗೆ ರಿಜರ್ವ್ ಏರಿಯಾದಲ್ಲಿ ಪವರ್ ಕ್ರಶರ್ ಹಾಕಿ ಬೆಲ್ಲ ತಯಾರು ಮಾಡಿದರೆ ಲೈಸೆನ್ಸ್ ತೆಗೆದುಕೊಳ್ಳಬೇಕು. ಆ ಏರಿಯಾದಲ್ಲಿ ಒಂದು ಕಂಟ್ರೋಲ್ ಇರಬೇಕು ಸಕ್ಕರೆ ಕಾರ್ಖಾನೆಗಳು ದೇಶಕ್ಕೆ ಸಕ್ಕರೆ ಒದಗಿಸಬೇಕು ಎಂಬ ಉದ್ದೇಶದಿಂದ ರಿಜರ್ವ್ ಏರಿಯಾದಲ್ಲಿ ಹೀಗೆ ಮಾಡಿದೆ. ಅಲ್ಲಿಯೂ 5 ಪರ್ಸೆಂಟ ನಷ್ಟು ಸ್ವಂತ ಉಪಯೋಗಕ್ಕೆ ಬೆಲ್ಲ ಮಾಡಿಕೊಳ್ಳುವುದಕ್ಕೆ ಬಿಟ್ಟಿದ್ದೇವೆ.

Amount Allotted for Social Welfare Programme to Scheduled Castes, Scheduled Tribes in North Kanara District under Third Five-Year Plan.

*Q.—176. **Sri S. P. PHAYADE** (Ankola).—

Will the Government be pleased to state :—

the amount allotted to North Kanara District under Social Welfare Programme for Scheduled Castes and Scheduled Tribes so far during III Five-Year period with regard to (i) Education, (ii) Agriculture and (iii) Industries; and what is the amount actually spent up-to-date?

A.—**Smt. YASHODARA DASAPPA** (Minister for Social Welfare).—

Statement enclosed giving details of schemes for Scheduled Castes. The information in respect of Scheduled Tribes is ' Nil ' as there are no Scheduled Tribe people in North Kanara District.

Statement showing the information regarding the grant allotted and spent under the Social Welfare Programme for Scheduled Caste during the Third Five Year Plan period with regard to (1) Education (2) Agriculture and Industries in the North Kanara District up to the end of December 1963.

SCHEDULED CASTES

Sl. No.	Name of the Schemes	Up to the end of 31st March 1963 in the Third Five Year Plan		During the year 1963 up to the end of 31st December 1963		Total to the end of 31st December 1963 during Third Plan period	
		Grant allotted	Spent	Grant allotted	Spent	Grant allotted	Spent
1	2	3	4	5	6	7	8
	Schemes for the Welfare of Scheduled Caste—						
	Education—						
1.	Scheduled Caste Boys Hostel (Plan) 3 hostels ..	37,560.00	28,109.58	22,388.00	9,731.20	59,948 .00	37,840.78
2.	Scheduled Caste Girls Hostel (Plan) 1 hostel ..	6,535.00	4,546.00	2,992.33	2,992.33	12,109.00	7,538.33
3.	Women Welfare Centre (Plan) 3 Centres ..	20,400.00	14,059.79	12,000.00	4,305.39	32,400.00	18,365.18
4.	Award of merit scholarships ..	28,300.00	26,255.00	..	..	28,300.00	26,255.00
5.	Harijan Education Week ..	550.00	540.00	275.00	200.00	1,090.00	740.00
	Total ..	93,345.00	73,510.37	40,237.00	17,228.92	89,338.00	64,835.78

1	2	3	4	5	6	7	8
Non-Plan—							
6.	Boys Hostel 4 ..	74,608.00	69,536.04	34,302.00	16,621.70	108,910.00	86,157.74
7.	Girls Hostel 2 ..	27,836.00	25,890.56	12,469.00	7,350.83	40,305.00	33,241.39
8.	Women Welfare Centre 6 ..	51,300.00	41,868.08	13,200.00	9,636.66	64,500.00	51,504.74
9.	Lumpsum Scholarship ..	10,000.00	4,271.00	5,000.00	..	15,000.00	4,271.00
	Total ..	163,744.00	141,565.68	64,961.00	33,609.19	228,715.00	175,174.87
		257,089.00	215,076.05	105,198.00	50,838.11	318,053.00	240,010.65
Agriculture—							
10.	Supply of Plough Bullocks, Seeds and Manure ..	12,300.00	12,300.00	..	..	12,300.00	12,300.00
11.	Supply of Milch Cows ..	3,100.00	3,100.00	600.00	..	3,700.00	3,700.00
	Total ..	15,400.00	15,400.00	600.00	..	16,000.00	16,000.00
Industries—							
12.	Tailoring Centre ..	21,220.00	18,776.57	12,000.00	6,252.85	33,220.00	25,029.42
13.	Aid to Poultry, Sheep rearing and Improvement ..	5,150.00	5,150.00	..	..	5,150.00	5,150.00
14.	Aid to Co-operative Craft ..	1,000.00	1,000.00	1,000.00	..	2,000.00	1,000.00
	Total ..	27,370.00	24,926.57	13,000.00	6,252.85	40,370.00	31,179,42

ಶ್ರೀ ಎಸ್. ಪಿ. ಘಾಯಿದೆ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿದ್ಧಿ ಎಂಬ ಜನಾಂಗವನ್ನು ಬ್ಯಾಕ್‌ವರ್ಡ್ ಕ್ಲಾಸಿನಲ್ಲಿ ಸೇರಿಸಿದ್ದೀರಾ ?

†ಶ್ರೀಮತಿ ಯಶೋಧರ ದಾಸಪ್ಪ.— ಸಿದ್ಧಿ ಜನಾಂಗದವರು ತಾವು ಶೆಡ್ಯುಲ್ಡ್ ಕ್ಲಾಸಿಗೆ ಸೇರಿದವರಲ್ಲ ಅಂತ ಹೇಳಿದರು. ಕೆಲವರು ಅವರು ಶೆಡ್ಯುಲ್ಡ್ ಕ್ಯಾಸ್ಟು ಅಂತ ಹೇಳುತ್ತಾರೆ. ಆದ್ದರಿಂದ ಅದು ಇನ್ನೂ ಅನುಮಾನ ಏರುತ್ತದೆ. ಅವರನ್ನು ಶೆಡ್ಯುಲ್ಡ್ ಕ್ಯಾಸ್ಟಿನಲ್ಲಿ ಸೇರಿಸಬೇಕೆ ಅನ್ನುವುದು ತೀರ್ಮಾನವಾಗಬೇಕು.

ಶ್ರೀ ಎಸ್. ಪಿ. ಘಾಯಿದೆ.—ಆ ಜನರನ್ನು ನೋಡಿದರೆ ಅವರು ಶೆಡ್ಯುಲ್ಡ್ ಕ್ಯಾಸ್ಟಿನವರ ಹಾಗೆ ಬಹಳ ಹಿಂದುಳಿದಿದ್ದಾರೆಯೆ ;

ಶ್ರೀಮತಿ ಯಶೋಧರ ದಾಸಪ್ಪ.—ಅವರೇ ಸೇರಿಸುವುದು ಬೇಡ ಅಂತ ಹೇಳುತ್ತಾರೆ.

ಶ್ರೀ ಎಸ್. ಪಿ. ಘಾಯಿದೆ.—ಏಕೆ ಬೇಡ ಅಂತ ಹೇಳುತ್ತಾರೆ.

ಶ್ರೀಮತಿ ಯಶೋಧರ ದಾಸಪ್ಪ.—ಅನ್‌ಟಚಬಲ್, ಅವರು ಅಲ್ಲ ಅನ್ನುವುದು ಅವರ ಭಾವನೆ ನಾನೆ ನೋಡಿದ್ದೇನೆ; ಅವರು ಹಿಂದುಳಿದವರು. ಬಹಳ ಹಿಂದುಳಿದಿದ್ದಾರೆ. ಅವರಿಗೆ ಹೆಚ್ಚಿನ ಸಹಾಯ ಒದಗಿಸುವುದು ನಮ್ಮ ಕರ್ತವ್ಯ. ಆವರೇ ಶೆಡ್ಯುಲ್ಡ್ ಕ್ಯಾಸ್ಟಿನಲ್ಲಿ ಸೇರಿಸಲು ಒಪ್ಪುತ್ತಾ ಇಲ್ಲ.

ಶ್ರೀ ಎಂ. ಸಿ. ಬಸಪ್ಪ.—ಸಿದ್ಧಿ ಜನಾಂಗದವರು ಶೆಡ್ಯುಲ್ಡ್ ಕ್ಯಾಸ್ಟು ಹೌದೋ ಇಲ್ಲವೋ ಎಂದು ಯಾವಾಗ ತೀರ್ಮಾನ ಮಾಡುವುದು, ಮತ್ತು ಮಾಡುವವರು ಯಾರು ?

ಶ್ರೀಮತಿ ಯಶೋಧರ ದಾಸಪ್ಪ.—ಈಗ ಅವರಿಗೆ other backward classes ಗೆ ಕೊಡ ತಕ್ಕಂಥ ಸೌಕರ್ಯಗಳನ್ನು ಕೊಡುತ್ತಾ ಇದ್ದೇವೆ. ಅವರು ಶೆಡ್ಯುಲ್ಡ್ ಕ್ಯಾಸ್ಟಿನಲ್ಲಿ ಸೇರದೆಹೋದರೆ, ನಾವು ಸೇರಿಸತಕ್ಕಂಥ ತೀರ್ಮಾನ ತೆಗೆದುಕೊಳ್ಳುವುದು ಹೇಗೆ ಅವರಿಗೆ ಬೇರೆ ವಿಧವಾಗಿ ನಾನು ಸಹಾಯವನ್ನು ಒದಗಿಸಬಹುದೋ ಅದನ್ನು ಒದಗಿಸುತ್ತಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—1962-63, 1963-64ನೇ ಇಸವಿಯಲ್ಲಿ Merit Scholarships ಎಷ್ಟು ಕೊಡಲಾಗಿದೆ ?

ಶ್ರೀಮತಿ ಯಶೋಧರ ದಾಸಪ್ಪ.—Education ಗೆ allotment ಇರುವುದು ರೂ 3,18,053. ರೂ 2,40,060, ಖರ್ಚು ಮಾಡಿದ್ದೇವೆ ; ಅಂದರೆ 75 ಪರ್ಸೆಂಟಿನಷ್ಟು.

Sri K. H. RANGANATH.—Is it not a fact that the awarding of merit scholarships has been given up by Government since 1962-63 ?

ಶ್ರೀಮತಿ ಯಶೋಧರ ದಾಸಪ್ಪ.—ಅದು ತಿಳಿದು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಶೆಡ್ಯುಲ್ಡ್ ಕ್ಯಾಸ್ಟ್ ಸೇರುವುದಿಲ್ಲ ಎಂದು ಹೇಳುತ್ತಾರೆ ಎಂದಿರಿ. ಹಾಗಾದರೆ ಅವರಿಗೆ ಶೆಡ್ಯುಲ್ಡ್ ಕ್ಯಾಸ್ಟಿಗೆ ಏನೇನು ಸವಲತ್ತುಗಳು ಸಿಗುತ್ತವೆಯೋ ಅವು ಸಿಗುವುದಿಲ್ಲ. ಅವರು ಸೇರದೆ ಹೊದರೆ, ಹಿಂದುಳಿದಿರತಕ್ಕಂಥವರಿಗೆ ಜಮೀನುಕೊಡತಕ್ಕಂಥಾದ್ದು, ಮಕ್ಕಳ ವಿದ್ಯಾಭ್ಯಾಸದ ಸೌಕರ್ಯ ಸ್ಕಾಲರ್‌ಶಿಪ್, ಮುಂತಾದುದನ್ನು ಕೊಡುವುದಕ್ಕೆ ಏನು ಕ್ರಮವನ್ನು ಸರ್ಕಾರ ಅನುಸರಿಸುತ್ತದೆ ?

ಶ್ರೀಮತಿ ಯಶೋಧರ ದಾಸಪ್ಪ.—Other Backward Classes ಗೆ ಇರುವ ಎಜುಕೇಶನ್ ಸೌಕರ್ಯಕೊಡಬಹುದು. ಜಮೀನು, ಮನೆಕೊಡುವುದಕ್ಕಾಗುವದಿಲ್ಲ ಕಾರವಾರದಲ್ಲಿ ಹಾಲಕ್ಕಿ ಒಕ್ಕಲು ಅಂತ 3900 ಜನರಿದಾರೆ ಅವರೂ ಬ್ಯಾಕ್ವರ್ಡ್ ಜನ ; ಅವರನ್ನೂ ಇನ್ನೂ ಬ್ಯಾಕ್ವರ್ಡ್ ಕ್ಲಾಸಿಗೆ ಸೇರಿಸಿಲ್ಲ. ಅವರ ನಡೆವಳಿಕೆಯನ್ನೆಲ್ಲಾ ನೋಡಿದರೆ ಅವರನ್ನು ಶೆಡ್ಯುಲ್ಡ್ ಟ್ರೈಬಿಗೆ ಸೇರಿಸಬೇಕಾದ್ದು ಅವಶ್ಯಕ. ಅವರನ್ನು ಸೇರಿಸಬೇಕೆಂದು ಕೇಳಿದ್ದೇವೆ ಅವರಿಗೆ economic aid ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬಹಳ ಬಡತನದಲ್ಲಿದ್ದಾರೆ. ಶೆಡ್ಯುಲ್ಡ್ ಕ್ಯಾಸ್ಟಿನವರ ಬಡತನ, ಕಷ್ಟನಿಷ್ಠುರಗಳು ಅವರಿಗೂ ಇರುತ್ತವೆ. ಅವರಿಗೆ ಏನು ಸಹಾಯ ಮಾಡಬೇಕೆಂದು ಸರಕಾರ ಪರ್ಯಾಲೋಚಿಸುತ್ತಿದೆ.

ಶ್ರೀ ಎಸ್. ಪಿ. ಘಾಯಿದೆ.—ಸಿದ್ಧಿ ಜನಾಂಗದವರನ್ನು ಶೆಡ್ಯುಲ್ಡ್ ಟ್ರೈಬಿಗೆ ಸೇರಿಸುವುದಕ್ಕೆ ಏನು ಕ್ರೊಂಡಗೆ ?

ಶ್ರೀಮತಿ ಯಶೋಧರ ದಾಸಪ್ಪ.—ಟ್ರೈಬಲ್ ಕ್ಯಾಲಫಿಕೇಶನ್ ಕೇಳುತ್ತಾರೆ.